**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ವಾದಿ ಪರವಾಗಿ ಶ್ರೀ ಜೆ.ಪಿ.ಎ. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.-1 ಮತ್ತು 2 | ಕೈಬರಹದ ಪಹಣಿಗಳು |
| ನಿಪಿ-3 | ಕಂಪ್ಯೂಟರ್ ಪಹಣಿ |

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಜಿ.ಜೆ. ವಕೀಲರಿಂದಃ**

ನನ್ನ ಅಜ್ಜನ ಹೆಸರು ಸಿದ್ದಪ್ಪ ಎನ್ನುವುದು ಸರಿ. ನನ್ನ ಅಜ್ಜನಿಗೆ ಗುರುಲಿಂಗಪ್ಪ, ಧರ್ಮರಾವ ಮತ್ತು ಪ್ರತಿವಾದಿ ಅಣ್ಣಾರಾವ ಎಂಬ ಮೂರು ಜನ ಮಕ್ಕಳು. ನನ್ನ ಅಜ್ಜನಿಗೆ ಹೆಣ್ಣು ಮಕ್ಕಳಿಲ್ಲ. ಐಯಮ್ಮ ಎಂಬಾಕೆ ಯಾರು ಎಂಬ ಪ್ರಶ್ನೆಗೆ ಸಾಕ್ಷಿ ಆಕೆ ಗುರುಲಿಂಗಪ್ಪನ ತಂಗಿ ಇರಬೇಕು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಐಯಮ್ಮ ಈಗ ಬದುಕಿದ್ದಾಳೆ ಎನ್ನುತ್ತಾರೆ. ನಿಮ್ಮ ಅಜ್ಜ ಸಿದ್ದಪ್ಪನ ಮಕ್ಕಳಾದ ಗುರುಲಿಂಗಪ್ಪ, ಧರ್ಮರಾವ, ಪ್ರತಿವಾದಿ ಅಣ್ಣಾರಾವ ಮತ್ತು ಐಯಮ್ಮ ಅವರ ತಂದೆ ಆಸ್ತಿಯನ್ನು ಪಾಲು ಮಾಡಿಕೊಂಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಐಯಮ್ಮನ ಗಂಡನ ಹೆಸರು ನನಗೆ ಗೊತ್ತಿಲ್ಲ.

ಗುರುಲಿಂಗಪ್ಪನ ಹೆಂಡತಿ ಹೆಸರು ಈರಮ್ಮ. ಸದರಿ ಗುರುಲಿಂಗಪ್ಪನಿಗೆ ಎಷ್ಟು ಜನ ಮಕ್ಕಳು ಎಂಬ ಪ್ರಶ್ನೆಗೆ ಸಾಕ್ಷಿ ನಾನೊಬ್ಬನೆ ಎನ್ನುತ್ತಾರೆ. ನನ್ನ ತಂದೆ-ತಾಯಿಗೆ ಹೆಣ್ಣು ಮಕ್ಕಳಿಲ್ಲ. ಧರ್ಮರಾವನ ಹೆಂಡತಿ ಹೆಸರು ಗುಂಡಮ್ಮ. ಸಾಕ್ಷಿ ಸ್ವ-ಇಚ್ಛೆಯಿಂದ ಧರ್ಮರಾವ ಮತ್ತು ಗುಂಡಮ್ಮ ಇಬ್ಬರು ತೀರಿಕೊಂಡಿದ್ದಾರೆ ಎನ್ನುತ್ತಾರೆ. ಪ್ರತಿವಾದಿ ಅಣ್ಣಾರಾವನ ಹೆಂಡತಿ ಹೆಸರು ಸುಂದ್ರಮ್ಮ. ಸುಂದ್ರಮ್ಮ ಈಗ ಬದುಕಿದ್ದಾಳೆ. ಪ್ರತಿವಾದಿಗೆ 4 ಜನ ಮಕ್ಕಳು ಎಂದರೆ ಸರಿ. ಪ್ರತಿವಾದಿಯ ಮಕ್ಕಳನ್ನು ಈ ದಾವೆಗೆ

ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ.

ನಿಮ್ಮ ಅಜ್ಜನ ಆಸ್ತಿಯನ್ನು ಅವರ ಮಕ್ಕಳು ಪಾಲು ವಿಭಾಗ ಮಾಡಿಕೊಂಡಾಗ ಯಾರ್ಯಾರಿಗೆ ಯಾವ-ಯಾವ ಆಸ್ತಿ ಬಂದಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಂದೆ ಗುರುಲಿಂಗಪ್ಪನಿಗೆ ಚಂದನಕೇರಾ ಗ್ರಾಮದ ಸ.ನಂ.305 ರಲ್ಲಿ 5 ಎಕರೆ 5 ಗುಂಟೆ, ಅದೇ ಗ್ರಾಮದ ಸ.ನಂ.236 ರಲ್ಲಿ 4 ಎಕರೆ ಮತ್ತು ಸ.ನಂ.138 ರಲ್ಲಿ 1 ಎಕರೆ 15 ಗುಂಟೆ ಜಮೀನು ಬಂದಿದೆ ಎನ್ನುತ್ತಾರೆ. ಸಾಕ್ಷಿ ಸ್ವ-ಇಚ್ಛೆಯಿಂದ ದಾವಾ ಸರ್ವೆ ನಂಬರ 92 ರಲ್ಲಿ ನನ್ನ ತಂದೆಗೆ ಪಾಲು ಬಂದಿಲ್ಲ ಎನ್ನುತ್ತಾರೆ. ಪಾಲು ವಿಭಾಗದಲ್ಲಿ ನಮ್ಮ ತಂದೆಯ ಪಾಲಿಗೆ ಬಂತು ಎಂದು ನಾನು ಮೇಲೆ ಹೇಳಿದ ಮೂರು ಜಮೀನುಗಳ ಖಾತೆ ಸದರಿ ಪಾಲು ವಿಭಾಗದ ಪ್ರಕಾರ ನನ್ನ ತಂದೆಯ ಹೆಸರಿಗೆ ಆಗಿತ್ತು. ನಿಮ್ಮ ತಂದೆ ತೀರಿಕೊಂಡ ಬಳಿಕ ಸದರಿ 3 ಜಮೀನುಗಳ ಖಾತೆ ನಿಮ್ಮ ಹೆಸರಿಗೆ ಬದಲಾವಣೆ ಆಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಆಗಿದೆ ಎನ್ನುತ್ತಾರೆ. ಸಾಕ್ಷಿ ಸ್ವ-ಇಚ್ಛೆಯಿಂದ ದಾವಾ ಜಮೀನು ನನ್ನ ಹೆಸರಿಗೆ ಆಗಿಲ್ಲ ಎನ್ನುತ್ತಾರೆ.

ಪ್ರತಿವಾದಿಗೆ ಪಾಲು ವಿಭಾಗದಲ್ಲಿ ಎಷ್ಟು ಜಮೀನು ಬಂದಿದೆ ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ತಂದೆಗೆ ಬಂದಷ್ಟೆ ಆಸ್ತಿ ಪ್ರತಿವಾದಿಗೂ ಬಂದಿದೆ ಎನ್ನುತ್ತಾರೆ. ಸಾಕ್ಷಿ ಸ್ವ-ಇಚ್ಛೆಯಿಂದ ಪ್ರತಿವಾದಿಗೂ ದಾವಾ ಸ್ವತ್ತಿನಲ್ಲಿ ಪಾಲು ಬಂದಿಲ್ಲ ಎನ್ನುತ್ತಾರೆ.

ನಿಮ್ಮ ತಂದೆ, ಪ್ರತಿವಾದಿ ಮತ್ತು ಅವರ ಮತ್ತೊಬ್ಬ ಸಹೋದರನ ನಡುವೆ ಪಾಲು ವಿಭಾಗ ಆಗಿ ಎಷ್ಟು ವರ್ಷ ಆಯಿತು ಎಂಬ ಪ್ರಶ್ನೆಗೆ ಸಾಕ್ಷಿ ಸುಮಾರು 50-55 ವರ್ಷ ಆಗಿರಬಹುದು ಎನ್ನುತ್ತಾರೆ. ಪಾಲು ವಿಭಾಗದ ಪ್ರಕಾರವೇ ನಿಮ್ಮ ತಂದೆ, ಪ್ರತಿವಾದಿ ಮತ್ತು ಅವರ ಇನ್ನೊಬ್ಬ ಸಹೋದರ ಧರ್ಮರಾವ ರವರ ಪಾಲಿಗೆ ಬಂದಿದ್ದ ಆಸ್ತಿಗಳ ಖಾತೆ ಅವರವರ ಹೆಸರಿಗೆ ಆಗಿದೆ ಎನ್ನುವುದು ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ದಾವಾ ಸ್ವತ್ತಿನ ಖಾತೆ ಆಗಿಲ್ಲ ಎನ್ನುತ್ತಾರೆ. ನಮ್ಮ ತಂದೆ ಮತ್ತು ಅವರ ಸಹೋದರರ ನಡುವೆ ನಡೆದ ಪಾಲು ವಿಭಾಗದ ಬಗ್ಗೆ ದಾಖಲೆ ಬರೆದಿಲ್ಲ ಎಂದರೆ ಸರಿ. ಪಾಲು ವಿಭಾಗದ ಪ್ರಕಾರ ತಮಗೆ ಬಂದ ಸ್ವತ್ತುಗಳ ಖಾತೆಯನ್ನು ತಮ್ಮಗಳ ಹೆಸರಿಗೆ ವರ್ಗಾವಣೆ ಮಾಡಿಕೊಡಬೇಕೆಂದು ನಿಮ್ಮ ಮತ್ತು ಅವರ ಸಹೋದರರು ಕಂದಾಯ ಅಧಿಕಾರಿಗಳಿಗೆ ಅರ್ಜಿ ಕೊಟ್ಟಿದ್ದರೆ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷಿ ಸ್ವ-ಇಚ್ಛೆಯಿಂದ ನಮ್ಮ ತಂದೆ ತೀರಿಕೊಂಡ ಬಳಿಕ ನನಗೆ ಗೊತ್ತಿರುವವರ ಕಡೆಯಿಂದ ಪಾಲು ವಿಭಾಗ ಆದ ಬಗ್ಗೆ ತಲಾಟಿ (ಗ್ರಾಮ ಲೆಕ್ಕಾಧಿಕಾರಿ) ಗೆ ಹೇಳಿ ಖಾತೆ ಬದಲಾವಣೆ ಮಾಡಿಸುವಂತೆ ಹೇಳಿದ್ದೇವೆ ಎನ್ನುತ್ತಾರೆ. ನೀವು ಹೇಳಿಸಿದಂತೆ ಜಮೀನಿನ

ಖಾತೆ ಬದಲಾವಣೆ ಆಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಆಗಿದೆ, ಆದರೆ ದಾವಾ ಸ್ವತ್ತಿನ ಖಾತೆ ನನ್ನ ಹೆಸರಿಗೆ ಆಗಿಲ್ಲ ಎನ್ನುತ್ತಾರೆ.

ನೀವು ತಲಾಟಿಗೆ ಹೇಳಿ ನಿಮ್ಮ ತಂದೆ ಪಾಲಿಗೆ ಬಂದ ಆಸ್ತಿಗಳ ಖಾತೆಯನ್ನು ನಿಮ್ಮ ಹೆಸರಿಗೆ ಮಾಡಿಸಿಕೊಳ್ಳುವ ಕಾಲಕ್ಕೆ ದಾವಾ ಆಸ್ತಿಯ ಖಾತೆ ಯಾರ ಹೆಸರಿಲ್ಲಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಂದೆ ಹೆಸರಿಗೆ ಇತ್ತು ಎನ್ನುತ್ತಾರೆ. ನಿಮ್ಮ ತಂದೆ ತೀರಿಕೊಂಡ ಬಳಿಕ ದಾವಾ ಸ್ವತ್ತಿನ ಖಾತೆ ಯಾರ ಹೆಸರಿಗೆ ಆಯಿತು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಕಾಕ ಪ್ರತಿವಾದಿಯ ಹೆಸರಿಗೆ ಆಗಿದೆ ಎನ್ನುತ್ತಾರೆ. ನನ್ನ ತಂದೆ ತೀರಿಕೊಂಡು ಸುಮಾರು 40 ವರ್ಷ ಆಯಿತು. 40 ವರ್ಷದ ಹಿಂದೆ ನಿಮ್ಮ ತಂದೆ ತೀರಿಕೊಂಡ ಬಳಿಕ ದಾವಾ ಸ್ವತ್ತಿನ ಖಾತೆ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿದ್ದನ್ನು ಪ್ರಶ್ನೆ ಮಾಡಿ ನೀವೆನಾದರೂ ಸದರಿ ವರ್ಗಾವಣೆ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲಾ ಎನ್ನುತ್ತಾರೆ.

ನಮ್ಮ ತಂದೆ ಹೆಸರಿನಿಂದ ದಾವಾ ಸ್ವತ್ತಿನ ಖಾತೆ ನೇರವಾಗಿ ಪ್ರತಿವಾದಿಯ ಹೆಸರಿಗೆ ಆಗಿದೆ ಎಂದು ಈಗ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಸ್ವತ್ತಿನ ಖಾತೆ ನಿಮ್ಮ ತಂದೆಯ ಹೆಸರಿನಿಂದ ನಿಮ್ಮ ಹೆಸರಿಗೆ ಆಗಿತ್ತು ನಂತರ ಸದರಿ ಖಾತೆ ಪ್ರತಿವಾದಿ ಹೆಸರಿಗೆ ಆಯಿತು ಎಂದು ಸೂಚಿಸಿದರೆ ಸಾಕ್ಷಿ ದಾವಾ ಸ್ವತ್ತಿನ ನನ್ನ ಹೆಸರಿಗೆ ಆಗಿತ್ತು ಎಂಬ ವಿಚಾರವೇ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ದಾವಾ ಸ್ವತ್ತಿನ ಖಾತೆ ಪ್ರತಿವಾದಿಯ ಹೆಸರಿಗೆ ಆಗಿ ಈಗ ಸುಮಾರು 40 ವರ್ಷ ಆಯಿತು ಎಂದರೆ ಸರಿ. ಪಾಲು ವಿಭಾಗದಲ್ಲಿ ದಾವಾ ಸ್ವತ್ತನ್ನು ಪ್ರತಿವಾದಿಗೆ ಪಾಲಿಗೆ ಕೊಡಲಾಗಿದ್ದರಿಂದ ಅದರ ಖಾತೆ ಪ್ರತಿವಾದಿಯ ಹೆಸರಿಗೆ ಆಗಿದೆ ಮತ್ತು ಅದೇ ಕಾರಣಕ್ಕೆ ದಾವಾ ಸ್ವತ್ತಿನ ಖಾತೆ ಪ್ರತಿವಾದಿಯ ಹೆಸರಿಗೆ ಆಗಿದ್ದ ಆದೇಶವನ್ನು ನಾವು ಇಲ್ಲಿಯವರೆಗೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ದಾವಾ ಸ್ವತ್ತಿನಲ್ಲಿ ನನಗೂ ಅರ್ಧ ಪಾಲು ಇದೆ ಎಂದು ನಾನು ಪ್ರತಿವಾದಿಯನ್ನು ಆಗಿನಿಂದಲೂ ಕೇಳುತ್ತಿದ್ದೇನೆ ಎನ್ನುತ್ತಾರೆ. 40 ವರ್ಷಗಳ ಹಿಂದೆ ದಾವಾ ಆಸ್ತಿಯ ಖಾತೆ ಪ್ರತಿವಾದಿಯ ಹೆಸರಿಗೆ ಆದ ಬಳಿಕ ಆತ ನೀವು ಕೇಳಿದಂತೆ ಸದರಿ ಆಸ್ತಿಯಲ್ಲಿ ನಿಮಗೆ ಪಾಲು ಕೊಡದೆ ಇದ್ದರಿಂದ ನೀವೆನಾದರೂ ಆತನ ವಿರುದ್ಧ ದಾವೆ ಹಾಕಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲಾ ಎನ್ನುತ್ತಾರೆ.

ನಿಮ್ಮ ವಾದ ಪತ್ರದಲ್ಲಿ ಹೇಳಿರುವಂತೆ ಪಾಲು ವಿಭಾಗದಲ್ಲಿ ಎಲ್ಲಾ ಆಸ್ತಿಗಳನ್ನು ಹಂಚಿಕೆ

ಮಾಡಿಕೊಂಡು ದಾವಾ ಸ್ವತ್ತನ್ನು ಮಾತ್ರ ಹಾಗೇ ಬಿಡಲಾಗಿತ್ತು ಎಂದು ತೋರಿಸಲು ದಾಖಲೆ ಏನಾದರೂ ಕೊಟ್ಟಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ದಾಖಲೆ ಕೊಟ್ಟಿಲ್ಲ, ಆಗಿನ ಕಾಲದಲ್ಲಿ ಯಾವುದೇ ದಾಖಲೆ ಬರೆದಿಲ್ಲ ಎನ್ನುತ್ತಾರೆ. ಪಾಲು ವಿಭಾಗದಲ್ಲಿ ಮನೆಯನ್ನು ಹಂಚಿಕೆ ಮಾಡಿಕೊಳ್ಳಲಾಗಿತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ಮನೆಯನ್ನು ಮತ್ತು ಜಾನುವಾರುಗಳನ್ನು ಪಾಲು ಮಾಡಿಕೊಂಡಿಲ್ಲ ಎನ್ನುತ್ತಾರೆ. ನೀವು ಈಗ ಯಾವ ಮನೆಯಲ್ಲಿ ವಾಸವಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ತಾಯಿ ಕೂಲಿ ಮಾಡಿ ಕಟ್ಟಿಸಿರುವ ಮನೆಯಲ್ಲಿ ವಾಸವಿದ್ದೇನೆ ಎನ್ನುತ್ತಾರೆ. ಸದರಿ ಮನೆಯ ಪಂಚಾಯತಿ ನಂಬರ ನನಗೆ ನೆನಪಿಲ್ಲ. ನಿಮ್ಮ ತಂದೆ ವಾಸವಿದ್ದ ಮನೆಯ ನಂಬರ ಹೇಳಬಹುದೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ಕಾರದಿಂದ ನನಗೆ ಕೊಡಲಾಗಿರುವ ಗುರುತಿನ ಚೀಟಿಯಲ್ಲಿ ಮತ್ತು ಪಡಿತರ ಚೀಟಿಯಲ್ಲಿ ನಾನು ವಾಸವಿರುವ ಮನೆ ನಂಬರ ನಮೂದಾಗಿಯೋ ಇಲ್ಲವೋ ಎಂದು ನನಗೆ ನೆನಪಿಲ್ಲ. ನಾನು ನನ್ನ ತಂದೆ ವಾಸವಿದ್ದ ಮನೆಯಲ್ಲೆ ಈಗಲೂ ವಾಸವಿದ್ದೇನೆ ಮತ್ತು ನನ್ನ ತಾಯಿ ಖರೀದಿಸಿದ್ದ ಮನೆಯಲ್ಲಿ ವಾಸವಿದ್ದೇನೆ ಎಂದು ಈಗ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮನೆಯಲ್ಲಿ ಪಾಲು ಕೊಟ್ಟಿಲ್ಲ ಎಂದು ನಾನು ಪ್ರತಿವಾದಿ ವಿರುದ್ಧ ಯಾವುದೇ ದಾವೆ ಹಾಕಿಲ್ಲ. ಯಾಕೆ ಮನೆಯ ಸಂಬಂಧ ದಾವೆ ಹಾಕಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಮನೆಯನ್ನು ಪಾಲು ಮಾಡಿದರೆ ಸ್ವಲ್ಪವೇ ಬರುತ್ತದೆ ಎಂದು ಹೇಳಿ ನನ್ನ ತಂದೆ ಸದರಿ ಮನೆಯಲ್ಲಿನ ತನ್ನ ಪಾಲನ್ನು ಪ್ರತಿವಾದಿಗೆ ಬಿಟ್ಟು ಕೊಟ್ಟರು ಎನ್ನುತ್ತಾರೆ. ಸದರಿ ವಿಚಾರ ನಿಮಗೆ ಹೇಗೆ ಗೊತ್ತಾಯಿತು ಎಂಬ ಪ್ರಶ್ನೆಗೆ ಸಾಕ್ಷಿ ಪಾಲು ವಿಭಾಗ ಆಗುವಾಗ ನಾನು ದೊಡ್ಡವನಾಗಿದ್ದೆ ಹಾಗಾಗಿ ನನಗೆ ಗೊತ್ತು ಎನ್ನುತ್ತಾರೆ. ಪಾಲು ವಿಭಾಗ ಆಗುವ ಕಾಲಕ್ಕೆ ನನಗೆ ತಿಳುವಳಿಕೆ ಬಂದಿತ್ತು ಎಂದರೆ ಸರಿ. ಪಾಲು ವಿಭಾಗದಲ್ಲಿ ನಿಮ್ಮ ತಂದೆಗೆ ಬಂದಿದ್ದ ಮನೆ ಈಗ ಯಾರ ಹೆಸರಿಗೆ ಇದೆ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಹೆಸರಿಗೆ ಇದೆ ಎನ್ನುತ್ತಾರೆ.

ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ನಡೆದಿದ್ದ ಪಾಲು ವಿಭಾಗದಲ್ಲಿ ಹೊಲ-ಮನೆ ಎಲ್ಲವು ಪಾಲು ಆಗಿದೆ ಮತ್ತು ಸದರಿ ಪಾಲು ವಿಭಾಗದಲ್ಲಿ ದಾವಾ ಸ್ವತ್ತು ಪ್ರತಿವಾದಿಯ ಪಾಲಿಗೆ ಬಂದಿದೆ ಎಂಬ ವಿಚಾರ ನನಗೆ ಗೊತ್ತಿದ್ದರು ಈಗ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆ ಬದಲಾವಣೆ ಮಾಡುವ ಸಲುವಾಗಿ ಆಗಿರುವ ಮುಟೇಷನ್ ಆದೇಶವನ್ನು ನಾನು ನೋಡಿಲ್ಲ. ಸದರಿ ಮುಟೇಷನ್ ಆದೇಶದಲ್ಲಿ ದಾವಾ ಸ್ವತ್ತು ಪಾಲು ವಿಭಾಗದಲ್ಲಿ ಪ್ರತಿವಾದಿಯ ಹೆಸರಿಗೆ ಬಂದಿರುವುದರಿಂದ ಅದರ ಖಾತೆಯನ್ನು ಆತನ ಹೆಸರಿಗೆ

ಬದಲಾವಣೆ ಮಾಡಲಾಗಿದೆ ಎಂದು ನಮೂದಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಖಾತೆ ಯಾವ ಆಧಾರದಲ್ಲಿ ಪ್ರತಿವಾದಿ ಹೆಸರಿಗೆ ಆಗಿದೆ ಎಂಬುದನ್ನು ತೋರಿಸಲು ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದು ಸೂಚಿಸಿದರೆ ಸಾಕ್ಷಿ ಪಹಣಿ ಪತ್ರಿಕೆಯನ್ನು ಕೊಟ್ಟಿದ್ದೇನೆ ಎನ್ನುತ್ತಾರೆ. ಸದರಿ ಪಹಣಿ ಪತ್ರಿಕೆಗಳಿಂದ ದಾವಾ ಸ್ವತ್ತಿನ ಖಾತೆ ಯಾವ ಆಧಾರದಲ್ಲಿ ಪ್ರತಿವಾದಿ ಹೆಸರಿಗೆ ಆಗಿದೆ ಎಂಬುದು ಗೊತ್ತಾಗುವುದಿಲ್ಲ ಎಂದರೆ ಸರಿ.

ನಮ್ಮ ಊರಿನಲ್ಲಿ ಆಂಧ್ರ ಪ್ರದೇಶದಿಂದ ಬಂದು ಹಲವರು ಜಮೀನು ಖರೀದಿ ಮಾಡಿದ್ದಾರೆ ಎನ್ನುವುದು ಸರಿ. ಸದರಿಯವರು ಪ್ರತಿ ಎಕರೆಗೆ ಎಷ್ಟು ಹಣ ಕೊಟ್ಟು ಖರೀದಿ ಮಾಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ನಿಖರವಾಗಿ ಗೊತ್ತಿಲ್ಲ, ಎಕರೆಗೆ 7-8 ಲಕ್ಷಕ್ಕೆ ಖರೀದಿ ಮಾಡಿದ್ದಾರೆಂದು ಕೇಳಿದ್ದೇನೆ ಎನ್ನುತ್ತಾರೆ. ಪ್ರತಿವಾದಿ ದಾವಾ ಸ್ವತ್ತನ್ನು ಮಾರಾಟ ಮಾಡಲು ಈಗಾಗಲೇ ಒಪ್ಪಂದ ಮಾಡಿಕೊಂಡಿದ್ದಾನೆ ಎನ್ನುವುದು ಸರಿ. ಸದರಿ ಮಾರಾಟ ಒಪ್ಪಂದದಡಿ ಪ್ರತಿವಾದಿ ಹಣ ಪಡೆದಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ ಪ್ರತಿವಾದಿ ಅಣ್ಣ-ತಮ್ಮಂದಿರಿಗೆ ಗೊತ್ತು ಎನ್ನುತ್ತಾರೆ. ಪ್ರತಿವಾದಿಯ ಅಣ್ಣ ತಮ್ಮಂದಿರು ಯಾರು ಎಂದರೆ ಸಾಕ್ಷಿ ನನ್ನ ತಂದೆ ಗುರುಲಿಂಗಪ್ಪ, ನನ್ನ ಕಾಕ ಬಸವಂತರಾವ, ರಾಜೇಂದ್ರ ರಾವ, ಬಾಬುರಾವ ಎನ್ನುತ್ತಾರೆ. ನಾನು ಹೆಸರಿಸಿದ ವ್ಯಕ್ತಿಗಳು ಮತ್ತು ಪ್ರತಿವಾದಿ ಅವರಿಗೆ ಸೇರಿದ ಆಸ್ತಿಗಳನ್ನು ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿದ್ದಾನೆ ಎನ್ನುವುದು ಸರಿ.

ಪ್ರತಿವಾದಿ ತನ್ನ ಪಾಲಿಗೆ ಬಂದ ಆಸ್ತಿಯನ್ನು ಮಾರಾಟ ಮಾಡಿಕೊಂಡರೆ ಆತನಿಗೆ ಹಣ ಬರುತ್ತದೆ ಎಂಬ ಹೊಟ್ಟೆ ಕಿಚ್ಚಿನಿಂದ ಈ ಸುಳ್ಳು ಕೇಸು ಹಾಕಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆ: ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**